ಸಂಕಟಗಳು ನಮ್ಮ ಮೇಲೆ ಹೇರಲ್ಪಟ್ಟಿದ್ದವು.

ಬರಲಿರುವ ಯುದ್ಧದ ಮುಂದೆ, ಕಳೆದ ಒಂಬತ್ತು ಗಂಟೆಗಳ ಪ್ರಯಾಣದ ಕಷ್ಟಗಳು ನೆನಪಿನಲ್ಲೇ ಉಳಿಯಲಿಲ್ಲ. ಒಂದಷ್ಟು ದೊಡ್ಡ ಮತ್ತು ತಕ್ಷಣದ ಸಮಸ್ಯೆಗಳನ್ನು ಹುಟ್ಟುಹಾಕಿ, ಗಮನವನ್ನು ಬೇರೆಡೆ ತಿರುಗಿಸಿಬಿಡುವ, ನಮ್ಮ ರಾಜಕಾರಣಿಗಳ ಚಿತ್ರ ಕಣ್ಮುಂದೆ ಹಾದುಹೋಯ್ತು.

ಏರ್ ಇಂಡಿಯಾದ ಇಂತಹ ವಿಶೇಷವಾದ ರೂಲ್ಸ್‌ಗಳ ಹಿಂದಿನ ಕಾರಣಗಳನ್ನು ಮತ್ತು ಅವುಗಳಿಂದ ಆಗುತ್ತಿರುವ ಅಧ್ವಾನಗಳನ್ನು ಯಾರಾದರೂ ತಾರ್ಕಿಕವಾಗಿ ಪ್ರಶ್ನಿಸಬಹುದೇ? ಮಾಧ್ಯಮಗಳನ್ನು ಬಳಸಿಕೊಂಡು ಚುನಾಯಿತರಾದ ಮೇಲೆ ಅವೇ ಮಾಧ್ಯಮದ ಪ್ರಶ್ನೆಗಳಿಗೆ ದೇಶದ ಪ್ರಧಾನಿಯೇ ಉತ್ತರಿಸದಿರುವಾಗ, ನಮ್ಮಿಂದ ಪ್ರತಿಶತ ಟಿಕೆಟಿನ ಹಣವನ್ನು ಪಡೆದಿರುವ ಏರ್‌ಲೈನ್ಸ್ ಉತ್ತರಿಸೀತೇ? ಸುಮ್ಮನಾದೆ.

ನೇರವಾಗಿ ಬರುವ ವಿಮಾನಗಳಿಗಿಂತ ಹದಿನೈದು ಸಾವಿರ ಅಗ್ಗವಾದ ಟಿಕೆಟು ಕೊಂಡಿದ್ದ ಕಾರಣ, 'ಚೀಪಾದ ಟಿಕೆಟ್ ಮಾತ್ರ ಬೇಕು, ಕಷ್ಟಗಳು ಬೇಡವೆಂದರೆ ಉಂಟೇ' ಎಂದು ಹಂಗಿಸಿದರೆ ಎನ್ನುವ ಭಯವೂ ಇತ್ತು. ಆದರೆ, ಮುಂದಿನ ವಿಮಾನ ತಪ್ಪಿದರೆ ಅದಕ್ಕಿಂತಲೂ ಹೆಚ್ಚಿನ ಹಣ ಕಟ್ಟಿ ಮತ್ತೆ ಟಿಕೆಟ್ ಖರೀದಿಸಬೇಕಾಗಬಹುದೆಂದು ಓಡತೊಡಗಿದೆ.

ಲಗೇಜ್ ಪಡೆದು, ಟ್ರಾಲಿಯಲ್ಲಿ ಎಳೆದುಕೊಂಡು ಮತ್ತೆ ಚೆಕಿನ್ ಮಾಡಲು ಸರದಿಯಲ್ಲಿ ನಿಂತೆ. ನನ್ನ ಮುಂದಿದ್ದ ವ್ಯಕ್ತಿ ನಾಲ್ಕು ಮದ್ಯದ ಬಾಟಲುಗಳನ್ನು ಏರ್‌ಪೋರ್ಟಿನಲ್ಲಿಯೇ ಖರೀದಿಸಿ ಕೈ ಬ್ಯಾಗಿನಲ್ಲಿ ಹಿಡಿದು ಹೊರಟಿದ್ದ. ಆದರೆ, ಅವು 'ಪಾರದರ್ಶಕ ಬ್ಯಾಗಿನಲ್ಲಿಲ್ಲ' ಎಂದು ತಕರಾರು ಶುರುವಾಯಿತು. ತೆರೆದಿದ್ದ ಪ್ಲಾಸ್ಟಿಕ್ ಬ್ಯಾಗಿನಲ್ಲಿದ್ದ ಅವು ಪಾರದರ್ಶಕ ಬ್ಯಾಗಿನಲ್ಲೇ ಯಾಕಿರಬೇಕೆಂದು ಸಿಬ್ಬಂದಿಗೂ ಗೊತ್ತಿರಲಿಲ್ಲ.

ಒಡೆದುಹೋದರೆ ಎಂದು ಆ ಪ್ರಯಾಣಿಕ ಅದನ್ನು ಚೆಕಿನ್ ಮಾಡಲು ತಯಾರಿರಲಿಲ್ಲ. ಆದರೆ, ಸಿಬ್ಬಂದಿಯಲ್ಲಿ, ಹೇಗಾದರೂ ಮಾಡಿ, ಸಾವಿರಾರು ರೂಪಾಯಿಗಳ ಮದ್ಯವನ್ನು ಅವನು ಬಿಟ್ಟುಹೋಗುವಂತೆ ಮಾಡಬೇಕೆನ್ನುವ ಆಸೆ ಸಾಯಲಿಲ್ಲ.

ಯೋಚಿಸತೊಡಗಿದೆ.

ಅದೇ, ಮುಂಬೈ ಏರ್‌ಪೋರ್ಟಿನೊಳಗೆ ಮದ್ಯ ಮಾರುವವರಿಗೆ ಪಾರದರ್ಶಕ ಬ್ಯಾಗುಗಳಲ್ಲಿ ಬಾಟಲಿಗಳನ್ನು ಹಾಕಿಕೊಡಬೇಕು ಎಂಬ ಈ ನಿಯಮವನ್ನು ಏರ್‌ಲೈನ್ಸಿನವರು ಯಾಕೆ ಹೇಳಿರಲಿಲ್ಲ ಎಂಬುದು ಅಲ್ಲಿ ಯಕ್ಷಪ್ರಶ್ನೆಯಾಗಿತ್ತು. ಇದು ಎಂತಹ ವ್ಯವಸ್ಥಿತ ಷಡ್ಯಂತ್ರ ಅನ್ನಿಸಿಬಿಟ್ಟಿತು.

'ರೂಲ್ಸ್ ಹೇಳಿದರೆ ಪ್ರಶ್ನೆ ಕೇಳ್ತಿಯೇನೋ?' ಎಂದು ಹೊಡೆದರೆ ಎಂಬಂತೆ, ಪ್ರಯಾಣಿಕನೇ ಸಂಧಾನಮಾಡಿಕೊಂಡ.

ಎಲ್ಲರ ಮುಂದೆಯೇ ತನ್ನ ಚೆಕಿನ್ ಲಗೇಜಿನ ಬೀಗ ತೆಗೆದು, ಅದರಲ್ಲಿದ್ದ ಪ್ಯಾಂಟು, ಶರ್ಟುಗಳಲ್ಲಿ ಆ ಬಾಟಲುಗಳನ್ನು ಸುತ್ತಿಟ್ಟು, 'ಒಡೆಯದಿರಲಿ'



ಎಂದು ಪ್ರಾರ್ಥಿಸಿ ಕಳಿಸುವವರೆಗೂ, ನಾವೆಲ್ಲ ಉಸಿರು ಬಿಗಿಹಿಡಿದು ಕಾದೆವು. ಇಷ್ಟೆಲ್ಲ ಆಗಲು ಇಪ್ಪತ್ತು ನಿಮಿಷಗಳಾದವು. ಅದನ್ನೆಲ್ಲ ನೋಡುತ್ತಿದ್ದ ಸಿಬ್ಬಂದಿ, ಆ ಬ್ಯಾಗಿನ ಮೇಲೆ 'ಫ್ರಜೈಲ್' (ನಾಜೂಕಿನ ವಸ್ತುಗಳಿವೆ) ಎನ್ನುವ ಸ್ಟಿಕರ್ ಅಂಟಿಸುವುದನ್ನು ಕೂಡ ಮರೆತ. ನಾನೇ ನೆನಪಿಸಿದೆ. ದುರ್ದಾನ ತೆಗೆದುಕೊಂಡಂತೆ ಒಂದು ಸ್ಟಿಕರನ್ನು ಅಂಟಿಸಿ, ಗುಮ್ಮನಂತೆ ಕೂತ.

ತಡವಾಗುತ್ತಿದ್ದ ಬಗ್ಗೆ ನನ್ನ ಹಿಂದೆ ಜಗಳವೂ ಶುರುವಾಗಿಹೋಗಿತ್ತು. ಇಷ್ಟೆಲ್ಲ ಆಗುತ್ತಿದ್ದಾಗ ಆ ಕೌಂಟರಿನ ಸಿಬ್ಬಂದಿಗೆ ಸಪೋರ್ಟ್ ಮಾಡಲು ಬಂದಿದ್ದ ಇತರೆ ಸಿಬ್ಬಂದಿ, ಮುಂದಿನ ವಿಮಾನಕ್ಕೆ ಹೋಗಬೇಕಿದ್ದ ನಮ್ಮಗಳ ಲಗೇಜನ್ನು ಚೆಕಿನ್ ಮಾಡಿಕೊಳ್ಳಲಿಲ್ಲ. ಆ ಒಬ್ಬ ಪ್ರಯಾಣಿಕನನ್ನು ಪಕ್ಕಕ್ಕೆ ನಿಲ್ಲಿಸಿ, ನಮ್ಮಗಳ ಲಗೇಜನ್ನು ತೆಗೆದುಕೊಂಡು ಸಹಕರಿಸಲೂ ಇಲ್ಲ ಎನ್ನುವುದು ಬೇರೆಯದೇ ಮಾತು.

ಅಲ್ಲಿಂದ, ನಿರ್ಗಮನದ ದ್ವಾರವನ್ನು ತಲುಪಲು ಸೂಚನಾಫಲಕಗಳು ಕಾಣಲಿಲ್ಲ. ಧಾರಾಕಾರ ಬೆವರಿನಲ್ಲಿ ಮೀಯುತ್ತ ಅವರಿವರನ್ನು ಕೇಳಿಕೊಂಡು ಓಡುತ್ತ, ಸೆಕ್ಯೂರಿಟಿ ಗೇಟನ್ನು ತಲುಪುವ ವೇಳೆಗೆ, ಅಲ್ಲಿದ್ದ ಜನರು ಒಂದೇ ದ್ವಾರಕ್ಕೆ ಎರಡೆರಡು ಕ್ಯೂಗಳನ್ನು ಕಟ್ಟಿಬಿಟ್ಟಿದ್ದರು.

ಆ ದ್ವಾರವನ್ನು ಕಾಯುತ್ತಿದ್ದ ವ್ಯಕ್ತಿ, ನಡೆಯುತ್ತಿದ್ದ ಕೂಗಾಟಗಳನ್ನು ನಿಯಂತ್ರಿಸಲಾಗದೆ ಅಸಹಾಯಕನಾಗಿ, ಆರ್ತನಾದ ಮಾಡುತ್ತಿದ್ದ. ತಡವಾಗಿಹೋಗಿದ್ದ ಕಾರಣ, ನನ್ನಂತೆ ಮುಂದಿನ ಗಮ್ಯವನ್ನು ತಲುಪುವ ವಿಮಾನವನ್ನು ಹಿಡಿಯಲು ಹೋಗುತ್ತಿದ್ದ ಪ್ರತಿಯೊಬ್ಬ ಪ್ರಯಾಣಿಕರೂ, ತಮ್ಮದೇ ಯುದ್ಧಗಳನ್ನು ಆರಂಭಿಸಿಬಿಟ್ಟರು. ಇಡೀ ಜಾಗ ರಣರಂಗವಾಗತೊಡಗಿತು. ಕನಿಷ್ಠ ಹತ್ತು ಜನ ಗಾರ್ಡ್‌ಗಳು, ಏನು ಮಾಡಬೇಕೆಂದು ತಿಳಿಯದೆ, ತಮಗೆ ತಿಳಿದಂತೆ ಪ್ರಯಾಣಿಕರ ಜೊತೆಗೆ ಜಗಳಕ್ಕೆ ಬಿದ್ದರು.

ಈ ವ್ಯವಸ್ಥಿತವಾದ ಅವ್ಯವಸ್ಥೆಯಲ್ಲಿ 'ಇಬ್ಬರ ಜಗಳದಲ್ಲಿ ಉಂಡವನೇ ಜಾಣ' ಎಂಬಂತೆ ಕೆಲವರು ನಡುವೆ ತೂರಿಕೊಂಡು ಸಾಲಿನಲ್ಲಿ ಮುನ್ನುಗ್ಗತೊಡಗಿದರು. ನಿಜವಾಗಿ ತಡವಾಗುತ್ತಿದ್ದ ಪ್ರಯಾಣಿಕರ ಸಂಕಟಗಳನ್ನು ನೋಡುತ್ತಿದ್ದಂತೆ, ಜರೂರತ್ತು ಇಲ್ಲದವರು ಕೂಡ ಹಾಗೇ ವರ್ತಿಸತೊಡಗಿದರು. ಕರೆಂಟು ಹೊಡೆದಂತೆ, ಕಲಿತಿದ್ದ ಎಲ್ಲಾ ಪಾಠಗಳು ಜಗ್ಗನೆ ನನ್ನ ತಲೆಯಲ್ಲಿ ಹೊತ್ತಿಕೊಳ್ಳತೊಡಗಿದವು. ನನ್ನಲ್ಲಿನ ಸಂಯಮದ ಕಟ್ಟೆ, ಪ್ರತಿ ಬಾರಿ ಒಡೆಯುವ ಅವೇ ಡ್ಯಾಂಗಳಂತೆ ಒಡೆದುಹೋಯಿತು.

ನನ್ನ ಪಕ್ಕ ಮತ್ತೊಂದು ಸಾಲು ಜನರು ಬಂದು ನಿಲ್ಲದಂತೆ, ಕೈಯನ್ನು ಅಡ್ಡವಿಟ್ಟು ತಡೆದು, ನನ್ನ ಸಾಲನ್ನು ನಾನೇ ನಿಯಂತ್ರಿಸತೊಡಗಿದೆ. ಕೆದರಿದ ಕೇಶ, ಕೆಂಪು ದಿರಿಸು, ಸುರಿಯುತ್ತಿದ್ದ ಬೆವರು, ಧ್ವನಿಯಲ್ಲಿದ್ದ ವ್ಯಗ್ರತೆಗೆ ಜನರು ತಾತ್ಕಾಲಿಕವಾಗಿ ಹಿಮ್ಮೆಟ್ಟಿದರು. ಮೇಲಧಿಕಾರಿ ಜಾಗಕ್ಕೆ ಬರದ ಕಾರಣ ಏನು ಮಾಡಬೇಕೆಂದು ತಿಳಿಯದೆ ಒದ್ದಾಡುತ್ತಿದ್ದ ಗಾರ್ಡ್‌ಗಳಿಗೆ ಇದರಿಂದ ಏನೋ ಹೊಳೆಯಿತು. ಎರಡು ಸಾಲು ನಿಲ್ಲುವಷ್ಟು ಬಿಟ್ಟಿದ್ದ ಜಾಗವನ್ನು ಒಬ್ಬ ಮನುಷ್ಯ ಮಾತ್ರ ಹಾಯುವಷ್ಟು, ಕಿರಿದುಗೊಳಿಸಿದರು.

ಬೆವರಿನಲ್ಲಿ ತೋಯುತ್ತ, ನೂಕು ನುಗ್ಗಲಿನ ಆಟದಲ್ಲಿ ಸೆಣಸುತ್ತ, ಬೆಂಗಳೂರಿಗೆ ಹೋಗುತ್ತಿದ್ದ ಏರ್ ಇಂಡಿಯಾ ವಿಮಾನ ಹತ್ತುವ ವೇಳೆಗೆ, ಮುಂದಿನ ದಿನಗಳಲ್ಲಿ 'ಶಕ್ತಿ' ಸ್ಕೀಂನ ಉಪಯೋಗ ಪಡೆಯಲು ಬೇಕಾದ ಎಲ್ಲ ಅನುಭವಗಳನ್ನು ನನ್ನವಾಗಿಸಿಕೊಂಡಿದ್ದೆ. ಸಾಧ್ಯವಿದ್ದಿದ್ದರೆ, ಪಕ್ಕದ ವ್ಯಕ್ತಿಯ ಭುಜದ ಮೇಲೆ ಹತ್ತಿಯಾದರೂ ಪರವಾಗಿಲ್ಲ, ವಿಮಾನದ ಕಿಟಕಿ ಮೂಲಕ ಸೀಟೊಂದರ ಮೇಲೆ ಟವಲು ಹಾಕಲು ನಾನು ತಯಾರಾಗಿಬಿಟ್ಟಿದ್ದೆ!

ಬೆಂಗಳೂರನ್ನು ತಲುಪುವ ವೇಳೆಗೆ **'Namaste and see you soon again'**, **'Fly the air India chain'** ಎಂಬೆಲ್ಲ ಜಾಹೀರಾತುಗಳು ಮೊಳಗತೊಡಗಿದವು. ನಿರಾಸೆ, ಭಯ, ಆತಂಕ, ತಲ್ಲಣಗಳ ರಸದೌತಣ ನೀಡಿ ಒಂದೇ ಪ್ರಯಾಣದಲ್ಲಿ ಮನಸ್ಸಿನ ಸ್ಥಿತ್ಯಂತರವನ್ನು ಸುಭಗಗೊಳಿಸಿ 'ಥ್ಯಾಂಕ್ಯೂ ಫಾರ್ ಫ್ಲೈಯಿಂಗ್ ವಿಥ್ ಅಸ್' ಎಂದು ಮೇಲೊಗ್ಗರಣೆಯನ್ನೂ ಹಾಕುತ್ತಿದ್ದವರಿಗೆ 'ಕೊನೆಗೂ ಗಮ್ಯವನ್ನು ತಲುಪಿಸಿದ ನಿಮಗೆ ಧನ್ಯವಾದಗಳು' ಎಂದು ಹೇಳುವಾಗ ಸಂತಸದ ನಿಟ್ಟುಸಿರೊಂದು ತಾನಾಗೇ ಹೊರಹೊಮ್ಮಿತು.

ಪ್ರಯಾಣ ಮುಗಿಸಿ ಕೆಳಗಿಳಿಯುವಾಗ ವಿಮಾನದ ಸಿಬ್ಬಂದಿಗಳು ಕೈಮುಗಿದು ನಿಂತುಕೊಂಡು ಬೀಳ್ಕೊಡಲು ತಯಾರಾದರು. **'We raise our hands, only to say Namaste'** (ನಾವು ಕೈ ಎತ್ತಿದರೆ ಅದು ನಮಸ್ತೆ ಹೇಳಲು ಮಾತ್ರ) ಎನ್ನುವ ಅವರ ಜಾಹೀರಾತು ನೆನಪಾಗಿ, ಹೊಸ ಅರ್ಥಗಳು ಹೊಳೆದವು.

ಬೆಂಗಳೂರಿನ ಸುಂದರವಾದ, ಜಗಮಗಿಸುವ, ಸುಸಜ್ಜಿತ ಏರ್‌ಪೋರ್ಟನ್ನು ತಲುಪುತ್ತಿದ್ದಂತೆ, ನಡೆದುದೆಲ್ಲವನ್ನು ನೀವಾಳಿಸಿಕೊಂಡು, ಟ್ರೆಂಡಿಂಗ್‌ನಲ್ಲಿರುವ ಸ್ವದೇಶೀ ಬಿಮ್ಮಿನಲ್ಲಿ, ಹೇಂಕರಿಸುತ್ತ ಹೊರಬಿದ್ದೆ.

ಪ್ರತಿಕ್ರಿಯಿಸಿ: **feedback@sudha.co.in**